ಕತೆ




**ಕೆ.ವಿ. ರಾಜಲಕ್ಷ್ಮಿ**

ಕಲೆ: ಆದಿತ್ಯ ಸದಾಶಿವ್


# ಋಣ

'ಉರ್ವಿ, ಭಾನುವಾರದ ಕಾರ್ಯಕ್ರಮ ನೆನಪಿದೆ ತಾನೇ. ಬೆಳಗ್ಗೆ ಎಂಟೂವರೆ ಹೊತ್ತಿಗೆ ಎಲ್ಲರೂ ಛತ್ರದಲ್ಲಿ ಇರ್ತೀವಿ, ಜೆಂಟಲ್ ರಿಮೈಂಡರ್' ಮಾನಸಿಯ ಮೆಸೇಜ್.

'ನಾಟ್ ಶ್ಯೂರ್, ನನಗಾಗಿ ಕಾಯೋದು ಬೇಡ' ಉತ್ತರಿಸಿದೆ.

ಯಾಕೋ ಮನಸ್ಸಿನ ಭಾರ ಇಳೀವಲ್ಲದು. ಮುಂದಿನವಾರ ಇವರ ಶ್ರಾದ್ಧ. ದೇವಸ್ಥಾನದಿಂದ ಸಂದೇಶ ಬಂದಿದೆ. ಇನ್ನೇನು, ಮಗನೂ ಬರಲಾರ, ಅವನಿಗೆ ಈ ಸಂಸ್ಕಾರಗಳಲ್ಲಿ ನಂಬಿಕೆಯಿಲ್ಲ. ನಾನೂ ಎಂದಿಗೂ ಬಲವಂತ ಮಾಡಿಲ್ಲ. ಶ್ರದ್ಧೆಯಿಂದ ಮಾಡದ ಯಾವ ಕೆಲಸವೂ ನೆಮ್ಮದಿ ನೀಡದು ಅನ್ನೋದು ನನ್ನ ವಾದ. ನನಗೆ ಮಾತ್ರ ಶ್ರದ್ಧೆ ಇದೆಯೇ ಎಂದರೆ ಅದಕ್ಕೂ ನಿಖರ ಉತ್ತರ ಸಿಗಲಾರದು. ನಾನು ತಾಯಿಯಾಗಲು ಮುಂದೆ ವಿಧವೆಯಾಗಲು ಅವನೇ ಕಾರಣ—ಒಂದು, ಭೌತಿಕವಾಗಿ ಇದ್ದದ್ದು ಮತ್ತು ಸತ್ತದ್ದು—ಎರಡಕ್ಕೂ ಬಂಧುಗಳ ಅನುಕಂಪ ಕಾಮನ್—ಆಗ, 'ಅಯ್ಯೋ ಪಾಪ, ಗಂಡ ಬಿಟ್ಟು ಹೋಗಿ, ಮೋಸವಾಗಿದೆ' ಈಗ 'ಪಾಪ ವಿಧವೆ, ಒಂಟಿಜೀವನ'. ನಿಜದಲ್ಲಿ ಅಂದೂ ಇಂದೂ ಒಂಟಿಯೇ! ಮನಸ್ಸು ವಿಚಿತ್ರವಾಗಿ ತರ್ಕಿಸಿತ್ತು.

ಅವರ ಹೆಸರಲ್ಲಿ ಇಡುಗಂಟು ಇಟ್ಟಾಗಿದೆ. ವರ್ಷಕೊಮ್ಮೆ ಅವರ ನೆನಕೆ, ನಾಲ್ಕು ಜನರಿಗೆ ಪ್ರಸಾದ. ರಜಾ ದಿನವಿದ್ದರೆ ಒಂದು ಗಳಿಗೆ ಹೋಗಿಬರಬಹುದು. ಅಲ್ಲವಾದರೆ ಹೋಗದಿರಲು ಒಂದು ನೆಪ. ಇತ್ತೀಚೆಗಂತೂ ಎಲ್ಲೂ ಹೋಗಲು ಮನಸಿಲ್ಲ. ದೇವಸ್ಥಾನದಲ್ಲಿ ಕುಂಕುಮ ಹೂವು ತೆಗೆದುಕೊಳ್ಳಲೂ ಅರಿಯದ ಹಿಂಜರಿಕೆ. ಕಾಲ ಎಷ್ಟು ಮುಂದುವರೆದಿದೆ ಎಂದರೂ ಸಂಪ್ರದಾಯದ ಬೇಲಿಗಳನ್ನು ಒಮ್ಮೆಲೇ ಕಳಚಿ ಬಿಸಾಡಲು ಆಗದು. ನಾನು ಬೆಳೆದುಬಂದ ವಾತಾವರಣವೇ ಅಂತಹುದು. ಇಲ್ಲೆಲ್ಲಾ ಮಾನಸಿಯ ತಗಾದೆ ಇದ್ದೇ ಇದೆ. ಈಗ ಜಿಷ್ಣುವಿನ ಹೊಸ ಅಲೆಯ ಮಾತುಗಳು ಸ್ವಲ್ಪ ಯೋಚಿಸುವಂತೆ ಮಾಡುತ್ತಿರುವುದಂತೂ ನಿಜ.

***

ಪಿಯುಸಿ ಫಲಿತಾಂಶ ಬರುವ ಮೊದಲೇ ಮದುವೆಯಾಗಿತ್ತು. ವರ್ಷಕ್ಕೇ ಜಿಷ್ಣು ಹುಟ್ಟಿದ್ದ. ಮದುವೆಯಾಗಿ ಮೂರು ವರ್ಷಕ್ಕೆ, ದುಡ್ಡು ಮಾಡೋಕ್ಕೆ ಅಂತ ಇವರು ಇದ್ದ ಕೆಲಸ ಬಿಟ್ಟು ದೂರದ ಶಹರಿಗೆ ಹೋಗುವ ನೆಪಕೊಟ್ಟಿದ್ದರು. ಅನಂತರ ಹೆಚ್ಚು ಸಂಪರ್ಕವಿಲ್ಲ. ಅಲ್ಲಿ ಇನ್ಯಾರದೋ ಸಹವಾಸ ಅನ್ನೋ ಒಡಕು ಸುದ್ದಿ. ಇತ್ತ ಬರಲೇ ಇಲ್ಲ. ಭಾವನವರಿಗೆ ಆಗೊಮ್ಮೆ ಈಗೊಮ್ಮೆ ಅವರ ವಿಷಯ ತಿಳಿಯುತ್ತಿತ್ತು. ತಪ್ಪು ಮಾಡಿದ್ದು ತಮ್ಮ ಮಗ ಎಂಬ ಒಂದೇ ಕಾರಣಕ್ಕೆ ನನಗೂ ನನ್ನ ಮಗನಿಗೂ ಅತ್ತೆಯ ಮನೆಯಲ್ಲಿ ಜಾಗವಿತ್ತು. ಯಾಕೋ ಕ್ರಮೇಣ ಅದೂ ಕುತ್ತಿಗೆಗೆ ಬರುವಂತಾದಾಗ ಸಹಾಯಕ್ಕೆ ಬಂದಿದ್ದವಳು ಇದೇ ಮಾನಸಿ. ಅವರ ಚಿಕ್ಕಪ್ಪನೇ ಡೈರೆಕ್ಟರ್